O.S.No.:504/2016
P.W.:1

ಈ ದಿನ ದಿಃ04.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಎಸ್.ಟಿ.ಎನ್ ವಕೀಲರಿಂದಃ**

ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನನಗೆ ಕನ್ನಡ ಓದಲು ಬರುವುದಿಲ್ಲ, ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರ ಯಾವ ಭಾಷೆಯಲ್ಲಿದೆ ಎಂದು ಹೇಳಲು ಬರುವುದಿಲ್ಲ. ನನ್ನ ಮಗನಿಗೆ ಭಾಗ ನೀಡುವಂತೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಈ ದಾವೆಯನ್ನು ನಾಲ್ಕು ದಾವಾಸ್ವತ್ತುಗಳ ಕುರಿತಾಗಿ ಸಲ್ಲಿಸಿರುತ್ತೇನೆ, ಅವುಗಳ ಸರ್ವೆ ನಂಬರ್ ಮತ್ತು ಚಕ್ಕುಬಂದಿ ಹೇಳಲು ಬರುವುದಿಲ್ಲ.

ನನ್ನ ಮತ್ತು 2 ನೇ ಪ್ರತಿವಾದಿಯ ವಿವಾಹವಾಗಿ 16 ವರ್ಷ ಆಗಿರುತ್ತದೆ. ನಾನು 2 ನೇ ಪ್ರತಿವಾದಿಯೊಂದಿಗೆ ಒಂದು ವರ್ಷ ಸಂಸಾರಿಕ ಜೀವನ ನಡೆಸಿರುತ್ತೇನೆ. ನಾನು 2 ನೇ ಪ್ರತಿವಾದಿಯೊಂದಿಗೆ ಎರಡು ತಿಂಗಳವರೆಗೆ ಮಾತ್ರ ಸಂಸಾರಿಕ ಜೀವನ ನಡೆಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಮಾವನಿಗೆ ಇಬ್ಬರೂ ಗಂಡು ಮಕ್ಕಳು ಮತ್ತು ಮೂರು ಜನ ಹೆಣ್ಣು ಮಕ್ಕಳಿರುತ್ತಾರೆ. ಅವರುಗಳೆಂದರೆ ಕಮಲಮ್ಮ, ಜಯಮ್ಮ, ನಾಗರಾಜು, ಚಿಕ್ಕತಾಯಮ್ಮ ಮತ್ತು ಕಾಳಯ್ಯ ಎಂದು ಇರುತ್ತಾರೆ. ಸದರಿ ನಾಗರಾಜು ಮತ್ತು ಆತನ ಹೆಂಡತಿ ಈಗಾಗಲೇ ಮೃತರಾಗಿದ್ದು, ಅವರ ಮಕ್ಕಳಾದ ಅಭಿಷೇಕ್ ಮತ್ತು ಚಂದ್ರಶೇಖರ್ ಈ ದಾವೆಯಲ್ಲಿ 3 ಮತ್ತು 4 ನೇ ಪ್ರತಿವಾದಿಗಳಾಗಿರುತ್ತಾರೆ ಎಂದರೆ ಸರಿ. ಈ ದಾವೆಯಲ್ಲಿ ನನ್ನ ಗಂಡನ ಸಹೋದರಿಯರಾದ ಕಮಲಮ್ಮ, ಜಯಮ್ಮ ಮತ್ತು ಚಿಕ್ಕತಾಯಮ್ಮ ಇವರನ್ನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಯ ಮೊದಲನೇ ಹೆಂಡತಿ ಶಿವಮ್ಮ ಇವರ ಇಬ್ಬರು ಮಕ್ಕಳಾದ

ಅರುಣ್ ಕುಮಾರ್ ಮತ್ತು ಶಿವಕುಮಾರ್ ಇವರನ್ನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮೊದಲನೇ ಹೆಂಡತಿ ಶಿವಮ್ಮ ತೀರಿಕೊಂಡ ನಂತರ ಕಾಳಯ್ಯ ನನ್ನನ್ನು ವಿವಾಹವಾಗಿರುತ್ತಾರೆ ಎಂದು ನುಡಿಯುತ್ತಾರೆ.

ನಾವು ಸುಮಾರು 15 ವರ್ಷಗಳಿಂದ ನಾನು ಮತ್ತು ನನ್ನ ಮಗ ನನ್ನ ತಾಯಿಯ ಮನೆಯಲ್ಲಿ ವಾಸವಿರುತ್ತೇವೆ ಎಂದರೆ ಸರಿ. ನಾನು ಮತ್ತು ನನ್ನ ಮಗ ಒಟ್ಟು ಕುಟುಂಬದಲ್ಲಿ ಇರುವುದಿಲ್ಲ ಹಾಗೂ ಒಟ್ಟು ಕುಟುಂಬದ ಸದಸ್ಯರಾಗಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾಸ್ವತ್ತುಗಳು ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಸ್ವತ್ತುಗಳು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ನನ್ನ ಗಂಡನ ಸ್ವಂತ ಊರು ಸೋರೆಕಾಯಿದೊಡ್ಡಿ ಗ್ರಾಮವಾಗಿರುತ್ತದೆ. ಸೋರೇಕಾಯಿದೊಡ್ಡಿ ಗ್ರಾಮದಲ್ಲಿ 2 ನೇ ಪ್ರತಿವಾದಿಗೆ ಸೇರಿದ ಒಂದು ಮನೆ ಇದ್ದು, ಅದರ ವಿಸ್ತೀರ್ಣ ಪೂರ್ವಪಶ್ಚಿಮ 26 ಅಡಿ ಉತ್ತರದಕ್ಷಿಣ 70 ಅಡಿ ಇದ್ದು, ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ.

ಸರ್ವೆ ನಂ.51/3 ಕ್ಷೇತ್ರ 4 ಗುಂಟೆ ಜಮೀನು ನನ್ನ ಗಂಡನ ಕುಟುಂಬಕ್ಕೆ ಸೇರಿದ ಸ್ವತ್ತಾಗಿರದೆ ಪುಟ್ಟಸ್ವಾಮಿ ಬಿನ್ ಮುಳ್ಳೀರೇಗೌಡ ಇತನಿಗೆ ಸೇರಿದ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಸ್ವತ್ತಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾಅನುಸೂಚಿತ ಸಂಖ್ಯೆ 3 ಮತ್ತು 4 ಸರ್ವೆ ನಂ.52/3 ಮತ್ತು 52/2 1 ನೇ ಪ್ರತಿವಾದಿ ಮತ್ತು ಆತನ ತಾಯಿ ಗುರುವಮ್ಮ ಇವರಿಗೆ ಸೇರಿದ ಸ್ವತ್ತಾಗಿರುತ್ತದೆ

ಎಂದರೆ ಸಾಕ್ಷಿಯು ನಮ್ಮ ಮಾವನಿಗೆ ಸೇರಿದ ಸ್ವತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ದಿ.26.12.1976 ರಂದು ಸರ್ವೆ ನಂ.52/3 ಮತ್ತು 52/2 ರ ಎರಡು ಸ್ವತ್ತುಗಳು ಬಾಲನಕಾಳಯ್ಯ ಇವರಿಂದ ನೋಂದಾಯಿತ ದಾನಪತ್ರದ ಮೂಲಕ ನನ್ನ ಮಾವ ಮತ್ತು ಅವರ ತಾಯಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ನನ್ನ ಮಾವನ ಸ್ವತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ.52/3 ಮತ್ತು 52/2 ಕ್ಕೆ ಸಂಬಂಧಿಸಿದಂತೆ ನನ್ನ ಮಾವ ಮತ್ತು ಅವರ ತಾಯಿಯ ಹೆಸರಿನಲ್ಲಿ ಖಾತೆ ಬರುತ್ತಿದೆ ಸಾಕ್ಷಿಯು ನನ್ನ ಮಾವನ ಹೆಸರಿನಲ್ಲಿ ಮಾತ್ರ ಖಾತೆ ಬರುತ್ತಿದೆ ಎಂದು ನುಡಿಯುತ್ತಾರೆ.

ಸದರಿ ಸರ್ವೆ ನಂ.52/3 ಮತ್ತು 52/2 ನ್ನು ದಿನಾಂಕ.09.11.2007 ರಂದು 5 ನೇ ಪ್ರತಿವಾದಿಗೆ ರೂ.60 ಸಾವಿರ ರೂಪಾಯಿಗಳಿಗೆ 1 ನೇ ಪ್ರತಿವಾದಿ ಮತ್ತು ಆತನ ತಾಯಿ ನೋಂದಾಯಿತ ಭೋಗ್ಯ ಪತ್ರದ ಮೂಲಕ ಭೋಗ್ಯಕ್ಕೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ನೀಡಿರಬಹುದು ಎಂದು ನುಡಿಯುತ್ತಾರೆ.

ಸರ್ವೆ ನಂ.52 ರಲ್ಲಿ 1 ಎಕರೆ ಜಮೀನನ್ನು ದಿ.1.9.1995 ರಂದು ನನ್ನ ಮಾವ ಮತ್ತು ಅವರ ತಾಯಿ 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1995 ರಿಂದ ಕ್ರಯಕ್ಕೆ ಪಡೆದಾಗಿನಿಂದ 5 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸಾಕ್ಷಿಯು ಭೋಗ್ಯದ ಆಧಾರದ ಮೇಲೆ ಸ್ವಾಧೀನದಲ್ಲಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.52/3 ರಲ್ಲಿ 2 ಎಕರೆ 31 ಗುಂಟೆ ಜಮೀನನ್ನು ನನ್ನ ಮಾವ ಮತ್ತು ನನ್ನ ಗಂಡ (ಪ್ರತಿವಾದಿ ನಂ.1 ಮತ್ತು 2) 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ಆಧಾರದ ಮೇಲೆ 5 ನೇ ಪ್ರತಿವಾದಿ ಮತ್ತು ಆತನ ಮಕ್ಕಳು ಸರ್ವೆ ನಂ.52/3 ರಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ.

O.S.No.:504/2016
P.W.:1

5 ನೇ ಪ್ರತಿವಾದಿಗೆ ಮಾಡಿಕೊಟ್ಟಿರುವ ಕ್ರಯಪತ್ರಗಳನ್ನು ಈ ದಾವೆಯಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.